ಸ್ವರೂಪ ಮತ್ತಷ್ಟು ಬದಲಾಗಿದೆ. ದೇಶ–ವಿದೇಶಗಳ ಬಹುತೇಕ ಚರ್ಚೆಗಳು ವಾದ–ವಿವಾದಗಳ ರೂಪದಲ್ಲಿಯೇ ನಡೆಯುತ್ತಿವೆ.

### ಸಮಕಾಲೀನ ವಾಗ್ವಾದಗಳು

21ನೇ ಶತಮಾನ ಸುಳ್ಳುಸುದ್ದಿಗಳ (ಫೇಕ್ ನ್ಯೂಸ್) ಕಾಲಘಟ್ಟವೆಂದು ಕುಖ್ಯಾತಿ ಗಳಿಸಿದೆ. ಟೀವಿ ಚಾನೆಲ್‌ಗಳು, ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳು ತಮ್ಮ ರೇಟಿಂಗ್ ಹೆಚ್ಚಿಸಿಕೊಳ್ಳುವ ಪೈಪೋಟಿಯಲ್ಲಿ ನಡೆಸುವ ವಾದ–ವಿವಾದಗಳು ತಳಗಟ್ಟಿಯಿರುವ ವಿಚಾರಗಳ ಸುತ್ತ ನಡೆಯುತ್ತವೆಯೇ ಎನ್ನುವ ಪ್ರಶ್ನೆಗೆ ಹೌದೆಂದು ಹೇಳುವುದು ಕಷ್ಟ. ವಿಶ್ವದ ರಾಜಕೀಯ ಧುರೀಣರು ವಾದಗಳನ್ನು ಹುಟ್ಟುಹಾಕುವುದರ ಹಿಂದಿನ ಉದ್ದೇಶಗಳನ್ನು ಪ್ರಶ್ನಿಸಬೇಕಾದ ಕಾಲವಿದು. ಒಂದು ವಿಚಾರದ ಬಗ್ಗೆ ತೀವ್ರ ಚರ್ಚೆ ಮತ್ತು ವಾದ ವಿವಾದಗಳು ನಡೆಯುತ್ತಿರುವಾಗ ಅದು ಮತ್ತೊಂದು ವಿಚಾರವನ್ನು ಮರೆಮಾಚಲು ಶುರುಮಾಡಿದ ಹೊಗೆಯೇ ಎನ್ನುವ ಸಂಶಯಗಳ ಬಗ್ಗೆಯೂ ಗಮನಹರಿಸಬೇಕಾಗುತ್ತದೆ. ಏಕೆಂದರೆ ಸುಳ್ಳು ಸುದ್ದಿಗಳ ಸುತ್ತ ನಡೆವ ಎಲ್ಲ ವಾದಗಳೂ ಸುಳ್ಳಾಗುತ್ತವೆ. ಆದರೆ ಸುದ್ದಿ ನಿಜವಾದಲ್ಲಿ ವಾದಗಳು ಕಾಲ್ಪನಿಕವಾದರೂ ಒಂದು ತಾತ್ಪರ್ಯವನ್ನು ತಲುಪುವುದು ಸಾಧ್ಯವಿದೆ.

### ಸತ್ಯಕ್ಕೂ ಮಾಸ್ಕ್!

ವಾದಗಳು ನಮ್ಮ ವೈಯಕ್ತಿಕ ಮತ್ತು ಸಮಾಜದ ಆರೋಗ್ಯಕ್ಕೆ ಅಗತ್ಯವೇನೋ ನಿಜ. ಆದರೆ ಇಂದಿನ ಸಂಕೀರ್ಣ ಯುಗದಲ್ಲಿ ನಾವು ಹಿಂದೆಂದಿಗಿಂತಲೂ ಹೆಚ್ಚು ವಾದಗಳಲ್ಲಿ ತೊಡಗಿಕೊಳ್ಳುತ್ತಿದ್ದೇವೆ. ಮೊದಲೆಲ್ಲ ಮನೆಯವರೊಡನೆ, ಬಂಧುಮಿತ್ರರೊಡನೆ ಆಗಾಗ ವಾದದಲ್ಲಿ ತೊಡಗುತ್ತಿದ್ದ ನಾವು, ಇಂದು ಹಲವು ಹತ್ತು ಹೊಸರೀತಿಗಳಲ್ಲಿ ವಾದಕ್ಕಿಳಿಯುತ್ತಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಟೀವಿ ಚಾನಲ್‌ಗಳಲ್ಲಿ, ಗೊತ್ತಿರುವ ಅಥವಾ ಗೊತ್ತಿಲ್ಲದ, ಸಂಬಂಧವಿಲ್ಲದ ವಿಚಾರಗಳಲ್ಲಿಯೂ ನಮ್ಮ ನಿಲುವನ್ನು ದಾಖಲಿಸುವ ಪ್ರಯತ್ನ ಪಡುತ್ತೇವೆ. ಕೆಲವೊಮ್ಮೆ ನಿಜವಾದ ವಿಚಾರದ ಬಗ್ಗೆ ವಾದಿಸದೆ ದಟ್ಟ ಪೂರ್ವಗ್ರಹಗಳನ್ನು ಇಟ್ಟುಕೊಂಡು ಅವುಗಳನ್ನು ವಿರೋಧಿಸುತ್ತಿದ್ದೇವೆ. ಎಲ್ಲವನ್ನೂ ಎಡ–ಬಲಗಳ ಲೆಕ್ಕದಲ್ಲಿ ನೋಡುತ್ತ ಮೂಲ ಆಕೃತಿಯನ್ನೇ ಕೆಡವುತ್ತಿದ್ದೇವೆ.

ಕೊರೊನಾ ಸಂದರ್ಭದಲ್ಲಿ ಮುಖಗವಸನ್ನು ಧರಿಸಬೇಕೇ ಬೇಡವೇ ಎನ್ನುವ ಚರ್ಚೆಯನ್ನೇ ನೋಡಿ. ಅಮೆರಿಕದ ಸರ್ಕಾರ ಸಾರ್ವಜನಿಕರಿಗೆ ಈ ಬಗ್ಗೆ ನಿಖರ ಮಾರ್ಗದರ್ಶನ ನೀಡಲಿಲ್ಲ. ಈ ಬಗ್ಗೆ ವಾದ–ವಿವಾದಗಳು ಹುಟ್ಟಿಕೊಂಡವು; ತತ್‌ಕ್ಷಣ ರಾಜಕೀಯವೂ ಕಾಲಿಟ್ಟಿತು.

‘ಮಾಸ್ಕನ್ನು ಧರಿಸುವುದು ಸ್ವಾಭಿಮಾನದ ಲಿಬರಲ್ಸ್‌ಗಾಗಿ ಆದರೆ, ಅದನ್ನು ಧರಿಸಲು ನಿರಾಕರಿಸುವುದು ನಿರಂಕುಶ ರಿಪಬ್ಲಿಕನ್‌ಗಳಿಗಾಗಿ’ ಎನ್ನುವ ಹೇಳಿಕೆಯೊಂದು ಅಮೆರಿಕದಲ್ಲಿ ಸುದ್ದಿ ಮಾಡಿತು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾಸ್ಕ್ ತೊಡಲು ತಾನು ಸಿದ್ಧನಿಲ್ಲ ಎಂದ ಮರುದಿನವೇ, ಅವರ ಪತ್ನಿ ಮಿಲಾನಿಯ ಮತ್ತು ಪುತ್ರಿ ಇವಾಂಕ ಮಾಸ್ಕ್ ಧರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ ಹಾಕಿದರು. ಎಡದವರು ಮಾಸ್ಕ್ ಹಾಕದವರ ಜನ್ಮ ಜಾಲಾಡಿದರೆ, ರಿಪಬ್ಲಿಕನ್‌ಗಳಲ್ಲಿ ಹಲವರು ಮತ್ತು ಕಡು ಬಲಪಂಥೀಯರು ತಮ್ಮ ಆರೋಗ್ಯವನ್ನು ಕಡೆಗಣಿಸಿ ಮಾಸ್ಕ್, ಸಾಮಾಜಿಕ ಅಂತರ ಎಲ್ಲವನ್ನೂ ಗಾಳಿಗೆ ತೂರಿದರು. ಆರೋಗ್ಯದ ಎಲ್ಲ ಮುಂಜಾಗ್ರತಾ ಕ್ರಮಗಳನ್ನು ರಾಜಕೀಯದ ದೃಷ್ಟಿಯಿಂದ ಮಾತ್ರ ನೋಡಿದರು. ಮಾಸ್ಕ್ ರಹಿತ ಮೆರವಣಿಗೆಯನ್ನು ನಡೆಸಿ, ಲಾಕ್‌ಡೌನ್ ವಿರೋಧಿಸಿದರು.

ವೈದ್ಯರ, ವಿಜ್ಞಾನಿಗಳ, ವಿಶ್ವಸಂಸ್ಥೆಯ ಎಲ್ಲರ ಶಿಫಾರಸ್ಸುಗಳಿಗೆ ರಾಜಕೀಯವನ್ನು ಬೆರೆಸಿ ಕಲಬೆರಕೆ ಮಾಡಿದರು. ಈ ಗೊಂದಲದಲ್ಲಿ ಸಾರ್ವಜನಿಕರು ತಮಗೆ ತೋಚಿದಂತೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು. ಇದರಿಂದಾಗಿ ಆರೋಗ್ಯದ ವಿಚಾರ ಮೂಲೆಗುಂಪಾಗಿ, ಮಾಸ್ಕ್ ಕುರಿತ ಸಂವಾದ ಅಲ್ಲಿನ ಜನರ ವೈಯಕ್ತಿಕ ರಾಜಕೀಯ ಹೇಳಿಕೆಗಳಂತೆ ಕಾಣತೊಡಗಿದವು. ವಾದದ ಕೇಂದ್ರವಿಚಾರವಾದ ‘ಮಾಸ್ಕನ್ನು ಧರಿಸುವುದರಿಂದ ಆರೋಗ್ಯಕ್ಕೆ ಒಳಿತೇ?’ ಎನ್ನುವ ಮೂಲ ಎಳೆ ತುಂಡರಿಸಿಹೋಗಿ, ಅದರ ಸುತ್ತ ಹುಟ್ಟಿಕೊಂಡ ಮಿಕ್ಕೆಲ್ಲ ಅನವಶ್ಯಕ ವಾದಗಳು ಆರೋಗ್ಯ ರಕ್ಷಣೆಯ ಬಗ್ಗೆ ನಿಲುವು ತಳೆಯುವಲ್ಲಿ ಗಂಭೀರವಾಗಿ ಎಡವಿದವು.

ವಾದವನ್ನು ರಾಜಕೀಯ ರೂಪದ ಆಯುಧವನ್ನಾಗಿ ಉಪಯೋಗಿಸುವ ರೀತಿ ಸಮಾಜ ಬದಲಾಗಿರುವುದು ಅನಾರೋಗ್ಯಕರ ಬೆಳವಣಿಗೆ. ಸಂಸ್ಥೆ, ಕುಟುಂಬ ಮತ್ತು ವೈಯಕ್ತಿಕವಾಗಿಯೂ ಇಂತಹ ವಾದಗಳಿಂದ ಪ್ರಯೋಜನವಿಲ್ಲ.

